# ಶ್ರೀರಾಮಕೃಷ್ಣರು ಮತ್ತು ದುರ್ಗಾಪೂಜೆ

ಸ್ವಾಮಿ ರಾಘವೇಶಾನಂದ

ನಮ್ಮ ಆಧ್ಯಾತ್ಮಿಕ-ಧಾರ್ಮಿಕ ಸಂಸ್ಕೃತಿಯ ದ್ಯೋತಕವಾಗಿರುವ ಶ್ರೀ ದುರ್ಗಾಪೂಜೆ ದೇಶದಾದ್ಯಂತ ಆಚರಿಸಲಾಗುವ, ಅದರಲ್ಲೂ ಬಂಗಾಳದಲ್ಲಿ ಅತ್ಯಂತ ಪ್ರಧಾನವಾದ ಉತ್ಸವವಾಗಿದೆ. ಶ್ರೀರಾಮಕೃಷ್ಣರ ಮೂಲಕ ರಾಮಕೃಷ್ಣ ಮಹಾಸಂಘದಲ್ಲೂ ಈ ಉತ್ಸವ ಅತ್ಯಂತ ಮಹತ್ವವನ್ನು ಪಡೆದಿದೆ. ಈ ವಿಷಯವನ್ನು ಕುರಿತು ವಿವರಿಸಿರುವ ಲೇಖಕರು, ಉದಕಮಂಡಲ ರಾಮಕೃಷ್ಣ ಮಠದ ಮುಖ್ಯಸ್ಥರು. ಉತ್ತಮ ವಾಗ್ಮಿಗಳು ಮತ್ತು ಸಂಘಟಕರಾಗಿರುವ ಸ್ವಾಮೀಜಿಯವರು ಉತ್ತಮ ಬರಹಗಾರರೂ ಆಗಿದ್ದಾರೆ; ಅನೇಕ ಉತ್ತಮ ಗ್ರಂಥಗಳನ್ನು ಅವರು ರಚಿಸಿದ್ದಾರೆ.



**ದೇ**ವರನ್ನು ಶಕ್ತಿಯಂತೆ ಮತ್ತು ದೇವತೆಯಂತೆ ಪೂಜಿಸುವುದು ಪುರಾತನ ಕಾಲದಿಂದಲೂ ಪ್ರಚಲಿತದಲ್ಲಿದೆ. ಬೇರೆಯ ಹಲವಾರು ವ್ರತ ಮತ್ತು ಉತ್ಸವಗಳಂತೆ ದುರ್ಗಾಪೂಜೆಯು ಕೂಡ ನಿತ್ಯ ಹಾಗೂ ಕಾಮ್ಯ ಕರ್ಮಗಳಂತಿದೆ. ಇದನ್ನು ೯ ದಿನಗಳಾದರೂ ಅಥವಾ ೩ ದಿನಗಳಾದರೂ ಆಚರಿಸಬಹುದು. ಆಶ್ವಯುಜ ಮಾಸದ ಶುಕ್ಲಪಕ್ಷದ ಸಪ್ತಮಿಯಿಂದ ನವಮಿಯವರೆಗೆ ಆಚರಿಸಬಹುದು. ಅಥವಾ ಷಷ್ಠಿಯಿಂದ ದಶಮಿಯವರೆಗೆ ಆಚರಿಸುವವವರೂ ಇದ್ದಾರೆ. ಒಂದೇ ದಿನ ಆಚರಿಸುವವರು ಅಷ್ಟಮಿ ಅಥವಾ ನವಮಿಯಂದು ಆಚರಿಸುತ್ತಾರೆ.

ಶ್ರೀರಾಮಕೃಷ್ಣರ ಜೀವನದಲ್ಲಿ ದುರ್ಗಾಪೂಜೆಯ ಸಂಬಂಧವಾಗಿ ಅನೇಕ ರೋಚಕ ಘಟನೆಗಳಿವೆ.

ಸ್ವಾಮಿ ಶಾರದಾನಂದರು ಲೀಲಾಪ್ರಸಂಗದಲ್ಲಿ ಬರೆಯುತ್ತಾರೆ: ''ಸಾಧಾರಣವಾಗಿ ದೇವ ದೇವಿಯರ ಹಬ್ಬದ ದಿನಗಳಲ್ಲಿ ಶ್ರೀರಾಮಕೃಷ್ಣರು ಅವತಾರ ವರಿಷ್ಠರಾಗಿದ್ದುದರಿಂದ, ಆ ದೇವ ದೇವಿಯರ ಭಾವ ಶ್ರೀರಾಮಕೃಷ್ಣರಲ್ಲಿ ಸಹಜವಾಗಿಯೇ ಮೂಡುತ್ತಿತ್ತು. ದುರ್ಗಾಪೂಜೆಯ ದಿನಗಳಲ್ಲಿ ದುರ್ಗೆಯ ಹಾವಭಾವಗಳು ಶ್ರೀರಾಮಕೃಷ್ಣರ ಅಂಗಾಂಗಗಳಲ್ಲಿ ಕಾಣಬಹುದಾಗಿತ್ತು. ಸಹಜವಾಗಿಯೇ ಅವರು ಸಮಾಧಿಸ್ಥರಾಗುತ್ತಿದ್ದರು. ಆಗ ಅವರ ಕರಗಳು ಅಭಯಹಸ್ತವನ್ನು ಸೂಚಿಸುತ್ತಿತ್ತು. ಅಂದರೆ ವರಗಳನ್ನೂ, ಅಭಯವನ್ನೂ, ಎಲ್ಲಾ ಭಯಗಳಿಂದ ಮುಕ್ತರೂ ಆಗುವಂತೆ ಆಶೀರ್ವದಿಸುವಂತೆ ಕಾಣುತ್ತಿತ್ತು.''

೧೮೬೮ರಲ್ಲಿ ಹೃದಯನಿಗೆ ತನ್ನ ಹಳ್ಳಿ ಸಿಹೋರ್‌ನಲ್ಲಿ ಪ್ರತಿಮೆಯನ್ನಿಟ್ಟು ದುರ್ಗಾಪೂಜೆಯನ್ನು ಮಾಡುವ ಆಸೆಯಾಯಿತು. ಅವನು ಅದಕ್ಕೆ ಅವರ ಮಾಲೀಕನಾದ ಮಥುರಾನಾಥ ವಿಶ್ವಾಸನ ಬಳಿ ರಜೆ ಕೇಳಲು ಹೋದ. ಉದಾರಿಯಾದ ಮಥುರ ರಜೆ ಮಾತ್ರವಲ್ಲದೆ ಪೂಜೆಗೆ ಬೇಕಾದ ಹಣ ಹಾಗೂ ವಸ್ತುಗಳನ್ನೂ ದಯಪಾಲಿಸಿದ. ಹೃದಯ ಈ ಪೂಜೆಗೆ ಶ್ರೀರಾಮಕೃಷ್ಣರನ್ನು ಕರೆದೊಯ್ಯಲು ಇಚ್ಛಿಸಿದ್ದ. ಆದರೆ ಮಥುರ ಈ ಸಲಹೆಗೆ ಸ್ವಲ್ಪವೂ ಒಪ್ಪಲಿಲ್ಲ. ಕಲ್ಕತ್ತೆಯಲ್ಲಿ ತನ್ನ ಮನೆಯಲ್ಲಿ ದುರ್ಗಾಪೂಜೆ

ನಡೆಯುವುದರಿಂದ ಆ ಸಮಯದಲ್ಲಿ ಶ್ರೀರಾಮಕೃಷ್ಣರು ಅಲ್ಲೇ ಇರಬೇಕೆಂದು ಅವನ ಇಚ್ಛೆಯಾಗಿತ್ತು . ಬಹಳ ವಿಷಾದದಿಂದ ಈ ವಿಷಯವನ್ನು ಹೃದಯ ಶ್ರೀರಾಮಕೃಷ್ಣರಿಗೆ ತಿಳಿಸಿದ. ಅವನನ್ನು ಸಮಾಧಾನಪಡಿಸುತ್ತಾ ಶ್ರೀರಾಮಕೃಷ್ಣರು ಹೇಳಿದರು: ''ಅದಕ್ಕೇಕೆ ದುಃಖಿಸುವೆ? ನಾನು ಪ್ರತಿದಿನ ಸಂಧ್ಯಾರತಿಯ ಸಮಯದಲ್ಲಿ ನನ್ನ ಸೂಕ್ಷ್ಮಶರೀರದಲ್ಲಿ ಬಂದು ನಿನ್ನ ಪೂಜೆಯನ್ನು ನೋಡುತ್ತೇನೆ. ನಾನು ನಿನ್ನ ಕಣ್ಣಿಗೆ ಮಾತ್ರ ಕಾಣಿಸುವೆನು. ಬೇರೆಯವರು ದರ್ಶಿಸಲಾಗುವುದಿಲ್ಲ.'' ಹೀಗೆ ಹೇಳಿ ಕಳುಹಿಸಿದರು. ಭಾರವಾದ ಮನಸ್ಸಿನಿಂದ ಹೃದಯ ತನ್ನ ಹಳ್ಳಿಗೆ ಹೋದ. ಅಲ್ಲಿ ಪೂಜೆಗೆ ಎಲ್ಲ ಸಿದ್ಧತೆಯನ್ನು ಮಾಡಿ, ಸಾಂಗೋಪಾಂಗವಾಗಿ ಶ್ರೀದುರ್ಗೆಯ ಪ್ರತಿಮೆಯಲ್ಲಿ ದೇವಿಯನ್ನು ಆವಾಹಿಸಿ, ಶ್ರೀರಾಮಕೃಷ್ಣರು ಹೇಳಿಕೊಟ್ಟ ರೀತಿಯಲ್ಲಿ ಹತ್ತುದಿನ ಪೂಜೆ ಮಾಡಿದ. ಸಪ್ತಮಿ, ಅಷ್ಟಮಿ, ನವಮಿಯಂದು ಸಂಧ್ಯಾರತಿ ಮಾಡುವಾಗ ಹೃದಯ ತಾಯಿ ದುರ್ಗೆಯ ಪಕ್ಕದಲ್ಲಿ ಶ್ರೀರಾಮಕೃಷ್ಣರು ಜ್ಯೋತಿರ್ಮಯರಾಗಿ ಸಮಾಧಿಸ್ಥಿತಿಯಲ್ಲಿ ನಿಂತಿದ್ದುದನ್ನು ತನ್ನ ಬಿಚ್ಚುಗಣ್ಣಿನಿಂದ ನೋಡಿದ.

ದುರ್ಗಾಪೂಜೆಯ ಸಮಯದಲ್ಲಿ ದುರ್ಗೆಯನ್ನು ಮಣ್ಣಿನ ಪ್ರತಿಮೆಯಲ್ಲಿ ಪೂಜೆ ಮಾಡಿ, ದಶಮಿಯಂದು ಅದನ್ನು ನದಿಯಲ್ಲಿ ವಿಸರ್ಜನೆ ಮಾಡುವರು. ಆ ದುರ್ಗೆಯ ಪ್ರತಿಮೆ ಎಷ್ಟು ಸುಂದರವಾಗಿರುತ್ತದೆಯೆಂದರೆ, ಭಕ್ತರಿಗೆ ಅದನ್ನು ವಿಸರ್ಜಿಸಲು ಮನಸ್ಸೇ ಬರುವುದಿಲ್ಲ. ಕಣ್ಣೀರಿಡುತ್ತಾ ವಿದಾಯ ಹೇಳುವರು. ಅಲ್ಲದೆ ಮೂರು ದಿನದ ಪೂಜೆಯಿಂದ ಅದರಲ್ಲಿ ಜೀವ ತುಂಬಿರುವಂತಿರುತ್ತದೆ. ಇಂತಹ ಅನುಭವ ಒಮ್ಮೆ ಮಥುರನಾಥನಿಗೆ ಆಗುತ್ತದೆ. ಒಮ್ಮೆ ಜಾನ್ ಬಝಾರ್‌ನ ತನ್ನ ಮನೆಯಲ್ಲಿ ದುರ್ಗಾ



ಮಥುರನಾಥ ವಿಶ್ವಾಸ

ಪೂಜೆಯನ್ನು ಏರ್ಪಾಡು ಮಾಡಿದ್ದ. ಅವನಿಗೆ ದುರ್ಗೆಯ ಪ್ರತಿಮೆ ಜೀವಂತವಾಗಿರುವಂತೆ ಭಾಸವಾಗುತ್ತಿತ್ತು . ಆದುದರಿಂದ ಅವನಿಗೆ ಆ ಪ್ರತಿಮೆಯನ್ನು ವಿಸರ್ಜಿಸಲು ಮನಸ್ಸೇ ಬರಲಿಲ್ಲ. ಅವನ ಮನೆಯವರಿಗೆ ಹೇಳಿದ, ''ನಾನು ಇದನ್ನು ಮನೆಯಲ್ಲೇ ನಿರಂತರವಾಗಿ ಇಟ್ಟುಕೊಂಡು ಪ್ರತಿದಿನ ಪೂಜೆ ಮಾಡುತ್ತೇನೆ.'' ಮನೆಯವರಿಗೆ ಹಾಗೂ ಅವನ ಸ್ನೇಹಿತರಿಗೆ ಇದು ಶಾಸ್ತ್ರವಿರುದ್ಧವೆಂದು ತಿಳಿದಿತ್ತು . ಆದರೆ ಅವನ ಇಚ್ಛೆಯ ವಿರುದ್ಧ ಹೋಗಲು ಯಾರಿಗೂ ಧೈರ್ಯ ಬರಲಿಲ್ಲ. ಆ ಸಮಯದಲ್ಲಿ ಶ್ರೀರಾಮಕೃಷ್ಣರು ಸಖೀಭಾವದ ಸಾಧನೆಯನ್ನು ಮಾಡುತ್ತಿದ್ದರು. ತಾವು ಹೆಂಗಸರಂತೆ ಅಲಂಕರಿಸಿಕೊಂಡು ದುರ್ಗೆಯ ಸೇವಕಿಯಂತೆ ಪ್ರತಿಮೆಗೆ ಗಾಳಿಬೀಸುವುದು, ಪ್ರತಿಮೆಯ ಬಟ್ಟೆಗಳನ್ನು ಸರಿಮಾಡುವುದು, ಅವಳಿಗೆ ಕುಂಕುಮ ಹಚ್ಚುವುದು, ಇತ್ಯಾದಿಗಳನ್ನು ಮಾಡುತ್ತಿದ್ದರು. ಅವರ ಭಾವ ಎಷ್ಟು ಸಹಜವಾಗಿತ್ತೆಂದರೆ ಎಲ್ಲರೂ ಅವರನ್ನು ಒಬ್ಬ ಹೆಂಗಸೆಂದೇ ಭಾವಿಸಿದ್ದರು. ಮಥುರನ ಮನೆಯವರು ಶ್ರೀರಾಮಕೃಷ್ಣರ ಬಳಿ ಬಂದು ಮಥುರನ ನಿರ್ಧಾರವನ್ನು ತಿಳಿಸಿ, ತಾವೇ ಏನಾದರೂ ಮಾಡಿ ಮಥುರನನ್ನು ಪ್ರತಿಮೆಯ ವಿಸರ್ಜನೆಗೆ ಒಪ್ಪಿಸಬೇಕೆಂದು ಪ್ರಾರ್ಥಿಸಿಕೊಂಡರು.

ಶ್ರೀರಾಮಕೃಷ್ಣರು ಮಥುರನ ಬಳಿ ಬಂದಾಗ ಅವನು ಅವರಿಗೂ ತನ್ನ ನಿರ್ಧಾರವನ್ನು ತಿಳಿಸಿದನು. ಶ್ರೀರಾಮಕೃಷ್ಣರು ಮಾತನಾಡುತ್ತಾ, ''ಅಷ್ಟೇನಾ, ನಿನ್ನ ಭಯ? ತಾಯಿ ನಿನ್ನನ್ನು ಅಗಲುತ್ತಾಳೆಂದು ಯಾರು ಹೇಳಿದರು? ಅವಳು ತನ್ನ ಮಗುವಿನಿಂದ ಹೇಗೆ ದೂರ ಇದ್ದಾಳು? ಇಷ್ಟು ದಿನ ಅವಳು ನಿನ್ನ ಹೃದಯದಿಂದ ಹೊರಗೆ ಬಂದು ಈ ಪ್ರತಿಮೆಯಲ್ಲಿ ಕುಳಿತು ಪೂಜೆಯನ್ನು ಸ್ವೀಕರಿಸಿದಳು. ಈಗ ಮತ್ತೆ ಇನ್ನೂ ಸಮೀಪವಾಗಿ ನಿನ್ನ ಹೃದಯದಲ್ಲೇ ಕುಳಿತಿರುತ್ತಾಳೆ'' ಹೀಗೆ ಹೇಳುತ್ತಾ ಅವನ ಹೃದಯವನ್ನು ಸ್ಪರ್ಶಿಸಿದರು. ಮಥುರನಾಥನಿಗೆ ತಾಯಿ ದುರ್ಗೆ ತನ್ನ ಹೃದಯದ ಸಿಂಹಾಸನದಲ್ಲಿ ಕುಳಿತು ರಾರಾಜಿಸುತ್ತಿರುವ ಅನುಭವವಾಯಿತು. ಅನಂತರ ಮಥುರನಾಥ ವಿಗ್ರಹದ ವಿಸರ್ಜನೆಗೆ ಒಪ್ಪಿಕೊಂಡ.

ಮತ್ತೊಮ್ಮೆ ಸುರೇಂದ್ರನಾಥ ಮಿತ್ರನೆಂಬ ಮತ್ತೊಬ್ಬ ಭಕ್ತ ತನ್ನ ಮನೆಯಲ್ಲಿ ದುರ್ಗಾಪೂಜೆಯ ವ್ಯವಸ್ಥೆಯನ್ನು ಮಾಡಿದ್ದ. ಅವನ ಮನೆಯವರೆಲ್ಲಾ ಅದಕ್ಕೆ ವಿರೋಧ ವ್ಯಕ್ತಪಡಿಸಿದ್ದರು. ಕಾರಣ ಹಿಂದೊಮ್ಮೆ ದುರ್ಗಾಪೂಜೆಯ ಸಮಯದಲ್ಲಿ ಅವರ ಮನೆಯಲ್ಲಿ ಒಂದು ಅನಾಹುತ ನಡೆದಿತ್ತು. ಆದ್ದರಿಂದ ಎರಡು ವರ್ಷಗಳು ದುರ್ಗಾಪೂಜೆಯನ್ನೇ ನಿಲ್ಲಿಸಿಬಿಟ್ಟಿದ್ದರು. ಆದರೆ ಈಗ ಸುರೇಂದ್ರ ಹಟ ಹಿಡಿದು ಶ್ರೀರಾಮಕೃಷ್ಣರ ಅನುಮತಿ ಪಡೆದು ದುರ್ಗಾಪೂಜೆಯನ್ನು ಮತ್ತೆ ಮಾಡಲು ನಿರ್ಧರಿಸಿದ್ದ. ಅಷ್ಟಮಿಯಂದು ಶ್ರೀರಾಮಕೃಷ್ಣರು ದಕ್ಷಿಣೇಶ್ವರದಲ್ಲಿ ತಮ್ಮ ಭಕ್ತರೊಂದಿಗೆ ಮಾತನಾಡುತ್ತಾ ಇದ್ದಕಿದ್ದ ಹಾಗೆ ಸಮಾಧಿಸ್ಥರಾದರು.



ಸಮಾಧಿಯಿಂದ ಕೆಳಗಿಳಿದ ಮೇಲೆ ಅಲ್ಲಿದ್ದವರಿಗೆ ಹೇಳಿದರು, ''ನಾನು ದಕ್ಷಿಣೇಶ್ವರದಿಂದ ಸುರೇಂದ್ರನಾಥನ ಮನೆಗೆ ಪ್ರಕಾಶ ಮಯವಾದ ಮಾರ್ಗವೊಂದನ್ನು ಕಂಡೆ. ಸುರೇಂದ್ರನ ಮನೆ ಯಲ್ಲಿ ಅವನ ಭಕ್ತಿಗೆ ಮೆಚ್ಚಿ ತಾಯಿ ದುರ್ಗೆ ಆ ಪ್ರತಿಮೆಯಲ್ಲಿ ಪ್ರತ್ಯಕ್ಷಳಾಗಿರುವುದನ್ನು ಕಂಡೆ. ಅವಳ ಮೂರನೇ ಕಣ್ಣಿನಿಂದ ಒಂದು ಜ್ಯೋತಿ ಹೊರಬಂದುದನ್ನು ಕಂಡೆ. ಅವನ ಮನೆಯಲ್ಲಿ ರಸ್ತೆಯವರೆಗೆ ಪಂಕ್ತಿಪಂಕ್ತಿಯಾಗಿ ದೀಪಗಳು ಹಚ್ಚಲ್ಪಟ್ಟಿದ್ದವು, ಮತ್ತು ಸುರೇಂದ್ರನು ಪ್ರತಿಮೆಯ ಮುಂದೆ ಕುಳಿತು ಭಕ್ತಿ ಭಾವದಿಂದ ಕಣ್ಣೀರು ಸುರಿಸುತ್ತಿದ್ದನು. ನೀವೆಲ್ಲಾ ಅಲ್ಲಿಗೆ ಹೋಗಿ ಅವನನ್ನು ಸಮಾಧಾನಪಡಿಸಿ.'' ನರೇಂದ್ರಾದಿ ಭಕ್ತರೆಲ್ಲರೂ ಸುರೇಂದ್ರನ ಮನೆಗೆ ಹೋದರು, ಶ್ರೀರಾಮಕೃಷ್ಣರು ಹೇಳಿದಂತೆ ಎಲ್ಲವೂ ಹಾಗೇ ನಡೆದಿತ್ತು .

ಒಂದು ದಿನ ಶ್ರೀರಾಮಕೃಷ್ಣರು ಪಂಚವಟಿಯಲ್ಲಿ ಕುಳಿತಿದ್ದಾಗ ತಾಯಿ ದುರ್ಗೆ ನಿಧಾನವಾಗಿ ನೀರಿನಿಂದ ನಡೆದುಕೊಂಡು ನೇರವಾಗಿ ಶ್ರೀರಾಮಕೃಷ್ಣರ ಬಳಿ ಬಂದು, ಅವರ ಹೃದಯವನ್ನು ಪ್ರವೇಶಿಸಿ ಬಳಿಕ ಅವರಲ್ಲಿ ಲೀನಳಾದಳು. ಶ್ರೀರಾಮಕೃಷ್ಣರು, ''ತಾಯಿ ದುರ್ಗೆ ನಡೆದು ಬಂದು ನನ್ನ ಶರೀರವನ್ನು ಹೊಕ್ಕಳು, ಗಂಗೆಯಿಂದ ಇಲ್ಲಿಯವರೆಗೂ ಅವಳ ಕಾಲ ಹೆಜ್ಜೆಯ ಗುರುತು ಇನ್ನೂ ಸ್ಪಷ್ಟವಾಗಿದೆ'' ಎಂದರು. ಹೃದಯನು ಹೋಗಿ ಪರೀಕ್ಷಿಸಿ, ಅದನ್ನು ನೋಡಿ ದಂಗಾದನು.

ಜಗದ್ಧಾತ್ರಿ ದುರ್ಗೆಯು ಈ ಬಾರಿ ಶ್ರೀರಾಮಕೃಷ್ಣರ ರೂಪ ದಲ್ಲಿ ಮಾತ್ರವಲ್ಲ ತಾಯಿ ಶಾರದಾದೇವಿಯ ರೂಪದಲ್ಲಿ ಕೂಡ ಅವತರಿಸಿ ಜಗತ್ತಿಗೆ ಮಂಗಳವನ್ನು ಉಂಟುಮಾಡುತ್ತಿದ್ದಾಳೆ.

ಶ್ರೀಮಾತೆಯವರು ಜನ್ಮ ತಾಳುವುದಕ್ಕೆ ಮೊದಲು ಶ್ರೀದುರ್ಗೆ ಇದನ್ನು ಖಚಿತಪಡಿಸಿದ್ದಳು. ಶಾಸ್ತ್ರಗಳ ಪ್ರಕಾರ ತಾಯಿದುರ್ಗೆಯ ವಾಸಸ್ಥಾನ ಬಿಲ್ವಮರ. ತಂತ್ರಶಾಸ್ತ್ರವು ಬಿಲ್ವ ಮರವನ್ನು ಸುಷುಮ್ನಾ ನಾಡಿಯ ಪ್ರತೀಕ ಎಂದು ತಿಳಿಸುತ್ತದೆ. ಸುಷುಮ್ನಾ ನಾಡಿಯಲ್ಲೇ ಕುಂಡಲಿನೀ ಶಕ್ತಿ ಜಾಗೃತಗೊಂಡು ಹರಿಯುತ್ತದೆ. ಒಮ್ಮೆ ತನ್ನ ತವರೂರಾದ ಸಿಹೋರ್ ಗ್ರಾಮದಿಂದ ಶ್ರೀಶಾರದಾ ಮಾತೆಯ ತಾಯಿಯಾದ ಶ್ಯಾಮಾಸುಂದರೀ ದೇವಿಯು ಜಯರಾಂಬಾಟಿಗೆ ಹಿಂದಿರುಗುತ್ತಿದ್ದಾಗ, ಬಿಸಿಲಿನ ಬೇಗೆಯಿಂದ ವಿಶ್ರಾಂತಿ ಪಡೆಯಲು ಒಂದು ಬಿಲ್ವದ ಮರದ ಕೆಳಗೆ ಕುಳಿತಿದ್ದಳು. ಆಗ ಅವಳು ಸುತ್ತಮುತ್ತಲೂ ನೋಡುತ್ತಿದ್ದಾಗ ಒಬ್ಬ ಸುಂದರಿ ಯಾದ ಒಬ್ಬ ಚಿಕ್ಕ ಹುಡುಗಿ ಬಿಲ್ವಮರದಿಂದ ಕೆಳಗಿಳಿದು ಬಂದು ಅವಳನ್ನು ಬಾಚಿ ತಬ್ಬಿ ಹಿಡಿದುಕೊಂಡಳು. ಶ್ಯಾಮಾಸುಂದರೀ ದೇವಿ ಈ ಘಟನೆಯಿಂದ ಚಕಿತಳಾಗಿ, ಪ್ರಜ್ಞೆ ತಪ್ಪಿ ಹಾಗೇ ಮಲಗಿ ಬಿಟ್ಟಳು. ಎಷ್ಟು ಹೊತ್ತು ಆ ಸ್ಥಿತಿಯಲ್ಲಿದ್ದಳೋ ಅವಳಿಗೇ ಅರಿವಿಲ್ಲ. ಸ್ವಲ್ಪ ಸಮಯದ ಮೇಲೆ ಅವಳ ಬಂಧುಗಳು ಅಲ್ಲಿಗೆ ಬಂದು ಅವಳನ್ನು ಮನೆಗೆ ಕರೆದೊಯ್ದರು. ಅವಳಿಗೆ ಪ್ರಜ್ಞೆ ಬಂದಾಗ ಆ ಪುಟ್ಟ ಹುಡುಗಿ ಅವಳ ಗರ್ಭವನ್ನು ಪ್ರವೇಶಿಸಿದಂತೆ ಅನುಭವವಾಯಿತು. ಈ ಘಟನೆ ಸಾಕ್ಷಾತ್ ದುರ್ಗೆಯೇ ಶ್ಯಾಮಾಸುಂದರಿಯ ಗರ್ಭವನ್ನು ಪ್ರವೇಶಿಸಿ, ಶ್ರೀಶಾರದೆಯ ರೂಪದಲ್ಲಿ ಜನ್ಮತಾಳಿದಳು ಎನ್ನುವುದನ್ನು ಖಚಿತಪಡಿಸುತ್ತದೆ.

ಸ್ವಾಮಿ ವಿವೇಕಾನಂದರೂ ಕೂಡ ಶ್ರೀಮಾತೆ ಶಾರದಾದೇವಿ ಯವರು ಸಾಕ್ಷಾತ್ ದುರ್ಗೆಯ ರೂಪ ಎನ್ನುವುದನ್ನು ಖಚಿತ ಪಡಿಸುತ್ತಾರೆ. ಒಬ್ಬ ಸೋದರ ಸಂನ್ಯಾಸಿಗೆ ಒಂದು ಪತ್ರದಲ್ಲಿ ಹೀಗೆ ಬರೆಯುತ್ತಾರೆ, ''ಸಹೋದರ! ನಾನು ಜೀವಂತ ದುರ್ಗೆ ಶ್ರೀಮಾತೆಯವರನ್ನು ಪ್ರತ್ಯಕ್ಷವಾಗಿ ಪೂಜೆ ಮಾಡಲು ಬಯಸುತ್ತೇನೆ. ಆಗ ಮಾತ್ರ ನನ್ನ ಹೆಸರು ಸಾರ್ಥಕವಾಗುತ್ತದೆ.''

೧೯೦೧ರಲ್ಲಿ ಸ್ವಾಮಿ ವಿವೇಕಾನಂದರು ತಮ್ಮ ಒಂದು ದಿವ್ಯ ದರ್ಶನದಲ್ಲಿ ಶ್ರೀದುರ್ಗೆಯ ಪೂಜೆ ಬೇಲೂರು ಮಠದಲ್ಲಿ ನಡೆ ಯುವುದನ್ನು ಕಂಡಿದ್ದರು. ೧೯೦೧ರ ದುರ್ಗಾಪೂಜೆಯ ಕೆಲವು ದಿನಗಳ ಮುಂಚೆ ಸ್ವಾಮಿ ಬ್ರಹ್ಮಾನಂದರು ಬೇಲೂರು ಮಠದ ಗಂಗೆಯ ದಡದಲ್ಲಿ ಕುಳಿತು ಗಂಗೆಯತ್ತ ನೋಡುತ್ತಿದ್ದರು. ಇದ್ದಕ್ಕಿದ್ದ ಹಾಗೆ ದಶಭುಜವುಳ್ಳ ತಾಯಿ ದುರ್ಗೆ ಗಂಗೆಯ ಮೇಲೆ ನಡೆದುಕೊಂಡು ಬಂದು ಮಠವನ್ನು ಪ್ರವೇಶಿಸಿದಳು. ಸ್ವಲ್ಪ ಹೊತ್ತಾದ ಮೇಲೆ ಸ್ವಾಮಿ ವಿವೇಕಾನಂದರು ಕಲ್ಕತ್ತೆಯಿಂದ ದೋಣಿಯಲ್ಲಿ ಬೇಲೂರು ಮಠಕ್ಕೆ ಬಂದವರು, ಬ್ರಹ್ಮಾನಂದರ ಬಳಿ ಬಂದು, ''ರಾಜಾ, ತಾಯಿ ದುರ್ಗೆಯ ಪೂಜೆಗೆ ಬೇಕಾದ ವ್ಯವಸ್ಥೆಯನ್ನೆಲ್ಲಾ ಮಾಡಿಸು. ಈ ಬಾರಿ ಮಠದಲ್ಲಿ ದುರ್ಗಾಪೂಜೆ ಯನ್ನು ಮಾಡೋಣ,'' ಎಂದು ಹೇಳಿದರು. ಆ ವರ್ಷದಿಂದ ಪ್ರತಿವರ್ಷ ಇಂದಿನವರೆಗೂ ಅತಿ ವಿಜೃಂಭಣೆಯಿಂದ ದುರ್ಗಾ ಪೂಜೆ ನಡೆಯುತ್ತಿದೆ. ಆ ಬಾರಿಯ ದುರ್ಗಾಪೂಜೆಯಲ್ಲಿ

ಶ್ರೀಮಾತೆ ಶಾರದಾದೇವಿಯವರು ಬೇಲೂರು ಮಠದಲ್ಲೇ ತಂಗಿ ಪ್ರತಿದಿನ ಪೂಜೆಯಲ್ಲಿ ಭಾಗಿಗಳಾಗಿದ್ದರು. ಅದರ ಬಗ್ಗೆ ಕೆಲವು ದಿನಗಳ ನಂತರ ಶ್ರೀಮಾತೆಯವರು ತಮ್ಮ ಭಕ್ತರಿಗೆ ಹೀಗೆ ಹೇಳಿದ್ದಾರೆ, ''ನರೇಂದ್ರ, ಈ ಬಾರಿ ದುರ್ಗಾಪೂಜೆ ವೇಳೆಗೆ ನನ್ನನ್ನು ಬೇಲೂರು ಮಠಕ್ಕೆ ಆಹ್ವಾನಿಸಿದ್ದ. ಪೂಜೆಯನ್ನು ಮಾಡಿದ ಪೂಜಾರಿಗೆ ನನ್ನ ಕೈಯಿಯಿಂದ ೨೫ ರೂಪಾಯಿಗಳನ್ನು ಕೊಡಿಸಿದ್ದ. ಆ ಪೂಜೆಗೆ ೧೪ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದ. ಮಠವೆಲ್ಲಾ ಜನರಿಂದ ತುಂಬಿತ್ತು. ಸಾಧುಸಂನ್ಯಾಸಿಗಳು ಬಹಳ ಕಷ್ಟಪಟ್ಟು ಕೆಲಸ ಮಾಡುತ್ತಿದ್ದರು. ನರೇಂದ್ರ ನನ್ನ ಬಳಿಗೆ ಬಂದು ಹೇಳಿದ, 'ತಾಯಿ, ನನಗೆ ಜ್ವರ ಬಂದು ಮಲಗುವಂತೆ ಮಾಡಿ'. ಹಾಗೆ ಹೇಳುತ್ತಿದ್ದಂತೆ ನನಗೆ ಸ್ವಲ್ಪ ಗಾಬರಿಯಾಯಿತು. ನರೇಂದ್ರ ಹೇಳಿದ, 'ಚಿಂತಿಸಬೇಡಿ, ತಾಯಿ. ನಾನೇ ಇದನ್ನು ಇಚ್ಛೆಯಿಂದ ಬರಿಸಿಕೊಂಡಿದ್ದೇನೆ. ಪಾಪ, ನಮ್ಮ ಹುಡುಗರೆಲ್ಲ ಬಹಳ ಕಷ್ಟಪಟ್ಟು ಕೆಲಸ ಮಾಡುತ್ತಿದ್ದಾರೆ. ನನಗೆ ಚಿಕ್ಕ ತಪ್ಪನ್ನೂ ಸಹಿಸಿಕೊಳ್ಳಲಾಗುವುದಿಲ್ಲ. ಕೋಪದಿಂದ ಅವರನ್ನೆಲ್ಲಾ ಸಿಕ್ಕಾಪಟ್ಟೆ ಬಯ್ದುಬಿಡುತ್ತೇನೆ. ಅವರನ್ನೆಲ್ಲಾ ಕೋಪದಿಂದ ಹೊಡೆದು ಬಿಡುತ್ತೇನೆ. ಆದುದರಿಂದ ನಾನು ಸ್ವಲ್ಪ ದೂರವಿರುವುದೇ ಒಳ್ಳೆಯದು.' ಸಂಜೆಯಾದ ಮೇಲೆ ಅವರ ಜ್ವರ ತಾನಾಗಿ ಕಡಿಮೆಯಾಯಿತು.'' ಶ್ರೀಮಾತೆಯವರು ಅವರ ಬಳಿ ಬಂದು 'ಎಲ್ಲಾ ಮುಗಿಯಿತು ಮೇಲೇಳು,' ಎಂದರು. ಆ ಬಾರಿ ಮಠದಲ್ಲಿ ಶ್ರೀಮಾತೆಯನ್ನು ಪೂಜಿಸಿ, ಸ್ವಾಮಿ ವಿವೇಕಾನಂದರು ತಾನು ಜೀವಂತ ದುರ್ಗೆಯ ಪೂಜೆಯನ್ನು ಮಾಡುತ್ತೇನೆ ಎಂದು ನುಡಿದಿದ್ದ ವಚನವನ್ನು ಸತ್ಯಗೊಳಿಸಿದರು.

೧೯೧೨ನೆಯ ಅಕ್ಟೋಬರ್ ತಿಂಗಳಂದು ಬೇಲೂರು ಮಠದಲ್ಲಿ ನಡೆದ ದುರ್ಗಾಪೂಜೆಯಲ್ಲೂ ಶ್ರೀಮಾತೆಯವರು ಭಾಗವಹಿಸಿದರು. ದುರ್ಗೆಯನ್ನು ಪ್ರತಿಮೆಯಲ್ಲಿ ಶಾಸ್ತ್ರೋಕ್ತವಾಗಿ ಸ್ಥಾಪಿಸಿದ ಸಮಯಕ್ಕೆ ಸರಿಯಾಗಿ ಶ್ರೀಮಾತೆಯವರು ಬೇಲೂರು ಮಠದ ಗೇಟಿನ ಬಳಿ ಬಂದರು. ಅವರು ಬಂದಿದ್ದ ಕುದುರೆ ಗಾಡಿಯ ಕುದುರೆಗಳನ್ನು ಸಡಿಲಗೊಳಿಸಿ, ಸಂನ್ಯಾಸಿಗಳೇ ಕುದುರೆ ಗಾಡಿಯನ್ನು ಪೂಜೆಯ ಮಂಟಪದವರೆಗೆ ಎಳೆದು ತಂದರು. ಸ್ವಾಮಿ ಪ್ರೇಮಾನಂದರು ಹರ್ಷದಿಂದ ಕಣ್ಣೀರು ಸುರಿಸುತ್ತಾ ತಾಯಿಗೆ ನಮಸ್ಕರಿಸಿದರು. ಶ್ರೀಮಾತೆಯವರು ಸುತ್ತಮುತ್ತ ಕಣ್ಣುಹಾಯಿಸಿ, ''ಓ! ಎಲ್ಲವೂ ಸಿದ್ಧವಾಗಿದೆ. ನಾನೇ ದುರ್ಗೆಯ ರೂಪದಲ್ಲಿ ಅಲಂಕರಿಸಿಕೊಂಡು ಬಂದಂತಿದೆ'' ಎಂದರು. ಈ ಮಾತನ್ನು ಕೇಳಿ ಅಲ್ಲಿದ್ದವರೆಲ್ಲಾ ಶ್ರೀಮಾತೆಯವರು ಬೇರಲ್ಲ, ದುರ್ಗೆ ಬೇರಲ್ಲ ಎಂದು ಭಾವಿಸಿದರು.

ಈ ಬಾರಿ ಪೂಜೆಯ ಆರಂಭದಲ್ಲಿ ಶ್ರೀಮಾತೆಯವರನ್ನು ದುರ್ಗೆಯ ಜೊತೆಯಲ್ಲಿ ಆವಾಹಿಸಿ ಪೂಜಿಸಲಾಯಿತು. ಆ ಪದ್ಧತಿ ಈಗಲೂ ಮುಂದುವರಿಯುತ್ತಿದೆ.

ಬಂಗಾಳಿಯ 'ಕೃತ್ತಿವಾಸ ರಾಮಾಯಣ'ದಲ್ಲಿ ಶ್ರೀರಾಮನು ದುರ್ಗೆಯನ್ನು ೧೦೮ ನೀಲಿ ಕಮಲಪುಷ್ಪಗಳಿಂದ ಪೂಜಿಸಿದ ಕಥೆಯುಂಟು. ಅದರಲ್ಲಿ ಒಂದು ಪುಷ್ಪ ಕಡಿಮೆ ಇದ್ದಿತು. ಆಗ ಶ್ರೀರಾಮನು ತನ್ನ ನೀಲಿಯ ಕಣ್ಣನ್ನೇ ಕಿತ್ತು ತಾಯಿಗೆ ಅರ್ಪಿಸಲು ಸಿದ್ಧನಾದನು. ತಾಯಿ ದುರ್ಗೆ ಅದರಿಂದ ಸಂತೋಷಗೊಂಡು ಅವನನ್ನು ಆಶೀರ್ವದಿಸಿದಳು. ಮಾತೆಯ ಪೂಜೆಯಲ್ಲಿ ಸ್ವಾಮಿ ಬ್ರಹ್ಮಾನಂದರೂ ಕಡಿಮೆಯಲ್ಲ. ಸಪ್ತಮಿಯಂದು ಅವರು ಶ್ರೀಮಾತೆಯವರ ಪಾದವನ್ನು ೧೦೮ ಕಮಲಗಳಿಂದ ಅರ್ಚಿಸಿದರು. ಶ್ರೀಮಾತೆಯ ಕೃಪೆಯಿಂದ ಅವರಿಗೆ ಶ್ರೀರಾಮನಷ್ಟು ಕಷ್ಟಪಡಬೇಕಾಗಲಿಲ್ಲ.

ಮೂರನೆಯ ಬಾರಿ ದುರ್ಗಾಪೂಜೆ ಬೇಲೂರು ಮಠದಲ್ಲಿ ಅಕ್ಟೋಬರ್ ೧೯೧೬ನೇ ಇಸವಿಯಲ್ಲಿ ನಡೆಯಿತು. ಇದರ ಬಗ್ಗೆ ಸ್ವಾಮಿ ಶಿವಾನಂದರು ಹೀಗೆ ಬರೆದಿದ್ದಾರೆ: 'ಇಂದು ತಾಯಿ ದುರ್ಗೆಯನ್ನು ಪ್ರತಿಮೆಯಲ್ಲಿ ನೇರವಾಗಿ ಪೂಜಿಸಿದಂತಾಯಿತು. ಮೂರು ದಿನವೂ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದರೂ ಪೂಜೆಗೆ ಯಾವ ಆತಂಕವೂ ಆಗಲಿಲ್ಲ. ಅಷ್ಟು ಮಾತ್ರವಲ್ಲ, ಪ್ರತಿದಿನ ಸಾವಿರಾರು ಭಕ್ತರು ಊಟಕ್ಕೆ ಕುಳಿತುಕೊಳ್ಳುವ ಸಮಯದಲ್ಲಿ ಶ್ರೀಮಾತೆಯವರ ಪ್ರಾರ್ಥನೆಯಿಂದ ಮಳೆ ತಾನಾಗಿಯೇ ನಿಂತು ಭಕ್ತರಿಗೆ ಯಾವ ಅನಾನುಕೂಲವೂ ಆಗದೆ ಪ್ರಸಾದ ಸ್ವೀಕರಿಸುವಂತೆ ಮಾಡಿತು.' ಶ್ರೀಮಾತೆಯವರು ಅದಕ್ಕಾಗಿ ಪ್ರಾರ್ಥಿಸುತ್ತಿದ್ದುದನ್ನು ಯೋಗಿನ್ ಮಾ ಪ್ರಕಟಪಡಿಸಿದಳು. ಆ ಸಮಯಕ್ಕೆ ಸರಿಯಾಗಿ ಶ್ರೀಮಾತೆ ದುರ್ಗೆಯ ಜಪ ಮಾಡುತ್ತಿದ್ದರು ಮತ್ತು ಹೀಗೆ ಪ್ರಾರ್ಥಿಸುತ್ತಿದ್ದರು:

''ತಾಯಿ, ಎಷ್ಟೊಂದು ಜನ! ಹೀಗೆ ಮಳೆ ಸುರಿಯುತ್ತಿದ್ದರೆ ಹೇಗೆ ತಾನೆ ಪ್ರಸಾದ ಸ್ವೀಕರಿಸಲು ಸಾಧ್ಯ? ನಿನ್ನ ಮಳೆ ಎಲ್ಲಾ ಎಲೆಗಳನ್ನೂ ಪ್ರಸಾದದ ಸಮೇತ ಕೊಚ್ಚಿಕೊಂಡು ಹೋಗಿ ಬಿಡುವುದು ತಾಯಿ, ನಮ್ಮನ್ನು ಕಾಪಾಡು.'' ಶ್ರೀಮಾತೆಯವರ ಪ್ರಾರ್ಥನೆಯನ್ನು ತಾಯಿ ಆಲಿಸಿ, ಮೂರು ದಿನ ಪ್ರಸಾದದ ಸಮಯದಲ್ಲಿ ಮಳೆ ನಿಲ್ಲುವಂತೆ ಮಾಡಿ ಅನುಗ್ರಹಿಸಿದಳು.

ಕೊನೆಯ ದಿನ ಸ್ವಾಮಿ ಶಿವಾನಂದರು ಭಕ್ತನೊಬ್ಬನು ತಂದಿದ್ದ ಚಿನ್ನದ ಬಳೆಯನ್ನು ತಾಯಿ ದುರ್ಗೆಗೆ ಕೊಡುವಂತೆ ಒಬ್ಬ ಬ್ರಹ್ಮಚಾರಿಯ ಕೈಯಲ್ಲಿ ಕೊಟ್ಟರು. ಆ ಬ್ರಹ್ಮಚಾರಿ ದುರ್ಗಾಪ್ರತಿಮೆ ಇದ್ದ ಮಂಟಪದ ಕಡೆ ಹೊರಟ. ತಕ್ಷಣ ಸ್ವಾಮಿಗಳು ಅವನಿಗೆ ಹೇಳಿದರು, ''ನಿಜವಾದ ಜೀವಂತ ದುರ್ಗೆ ಇಲ್ಲಿರುವಾಗ ಪ್ರತಿಮೆಯ ಮಂಟಪದ ಕಡೆಗೆ ಏಕೆ ಹೋಗುತ್ತಿದ್ದೀ? ಹೋಗಿ ಶ್ರೀಮಾತೆಯ ಪಾದಗಳಲ್ಲಿ ಇದನ್ನಿಟ್ಟು ಅವರಿಗೆ ನಮಸ್ಕರಿಸು. ನಾವು ನಿಜವಾಗಿ ಅವರನ್ನೇ ಈ ಪ್ರತಿಮೆಯ ಮೂಲಕ ಪೂಜಿಸುತ್ತಿರುವೆವು.''

ಇವೆಲ್ಲ ಘಟನೆಗಳು ಶ್ರೀಮಾತೆ ಸಾಕ್ಷಾತ್ ದುರ್ಗೆ ಎನ್ನುವುದನ್ನು ಸ್ಪಷ್ಟೀಕರಿಸುತ್ತವೆ.